ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಜಕಾತಿ ಅನುದಾನದ ಮೊತ್ತ ಒಟ್ಟು ರೂ. 9,91,232.00ಗಳನ್ನು 4 ಸಮನಾದ ಕಂತುಗಳಲ್ಲಿ ಬಿಡುಗಡೆ ಮಾಡಲಾಗುವುದು.

ವಾಹನ ತೆರಿಗೆ 4.20 ಲಕ್ಷ ರೂ.ಗಳನ್ನು ವರ್ಷಕೊಮ್ಮೆ (ಮಾರ್ಚ್ ಅಂತ್ಯದಲ್ಲಿ) ಬಿಡುಗಡೆ ಮಾಡಲಾಗುವುದು.

ಆ) ಪುರಸಭೆಯಿಂದ ಯಾವುದೇ ಕೋರಿಕೆ ಬಂದಿಲ್ಲ. ಆದರೆ, ಮಾನ್ಯ ಶಾಸಕರು, ಹೊಳೇನರಸೀಪುರ ಇವರು ರೂ. 5.00 ಲಕ್ಷಗಳನ್ನು ಕೋರಿರುತ್ತಾರೆ.

ಇ) ಸರ್ಕಾರದಲ್ಲಿ ಇರುವ ಎಲ್ಲಾ ಅನುದಾನಗಳನ್ನು ಬಿಡುಗಡೆ ಮಾಡಲಾಗುವುದು.

ಈ) ಐ.ಡಿ.ಎಸ್.ಎಂ.ಟಿ. ಯೋಜನೆ ಅಡಿಯಲ್ಲಿ 1982-83ನೇ ಸಾಲಿಗೆ ಒಟ್ಟು 75.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಅಧ್ಯಕ್ಷರು : ಮಂಡಿಸಲಾಯಿತು.

ವರದಿಯನ್ನೊಪ್ಪಿಸುವುದು

ಶ್ರೀ ಅಂಜನಮೂರ್ತಿ (ಉಪಾಧ್ಯಕ್ಷರು) : ಮಾನ್ಯ ಅಧ್ಯಕ್ಷರೇ, ಖಾಸಗಿ ಸದಸ್ಯರ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಯ 2ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

ಅಧ್ಯಕ್ಷರ ಅನುಮತಿ ಕೋರಿ ಪ್ರಸ್ತಾಪಿಸಲಾದ ವಿಷಯಗಳು

11.00 ಎ.ಎಂ

ಮುಧೋಳ ತಾಲ್ಲೂಕಿನ ಸಮೀರವಾಡಿ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರುವ ಕಬ್ಬು ಬೆಳೆಗಾರರಿಗೆ ತಮ್ಮ ಕಬ್ಬನ್ನು ಹೊರಗಡೆಗೆ ಸಾಗಿಸಲು ಪರವಾನಗಿ ಕೊಡುವುದರ ಬಗ್ಗೆ

ಶ್ರೀ ಹೆಚ್. ವಿಶ್ವನಾಥಯ್ಯ (ಚಿತ್ರದುರ್ಗ) : ಮಾನ್ಯ ಅಧ್ಯಕ್ಷರೇ, ಮುಧೋಳ ತಾಲ್ಲೂಕಿನಲ್ಲಿ ಸಮೀರವಾಡಿ ಎಂಬ ಸಕ್ಕರೆ ಕಾರ್ಖಾನೆ ಇದೆ. ಆ ಕಾರ್ಖಾನೆ ವ್ಯಾಪ್ತಿಯಲ್ಲಿ ಇವತ್ತು ಸಾವಿರಾರು ಎಕರೆಯಲ್ಲಿ ಕಬ್ಬನ್ನು ಬೆಳೆದಿದ್ದಾರೆ. ಆ ಕಾರ್ಖಾನೆಗೆ ಇರುವ ಅರೆಯುವ ಶಕ್ತಿಗಿಂತ ಹೆಚ್ಚಾಗಿ ಕಬ್ಬನ್ನು ಅಲ್ಲಿ ಬೆಳೆದಿದ್ದರಿಂದ ಅದನ್ನು ಮಹಾರಾಷ್ಟ್ರ ಮತ್ತಿತರ ಕಡೆಗಳಿಗೆ ತೆಗೆದುಕೊಂಡು ಹೋಗಿ ಅರೆಯಲಿಕ್ಕೆ ಕೊಡುವುದು ಅವಶ್ಯಕವಾಗಿದೆ. ಈ ವಿಚಾರದಲ್ಲಿ ಅಲ್ಲಿಯ ರೈತರೂ ಸಹ ಅನೇಕ ಸಲ ಇಲ್ಲಿ ಪ್ರತಿನಿಧಿಸಿದ್ದಾರೆ. ಇವತ್ತಿನ ದಿವಸ ಲಕ್ಷಾಂತರ ಟನ್ ಕಬ್ಬು ಹೆಚ್ಚಿಗೆ ಇದೆ. ಅದನ್ನು ಅರೆಯುವ ಸಾಮರ್ಥ್ಯ ಆ ಸಕ್ಕರೆ ಕಾರ್ಖಾನೆಗೆ ಇಲ್ಲ. ಅದನ್ನು ಮಹಾರಾಷ್ಟ್ರಕ್ಕೆ ತೆಗೆದುಕೊಂಡು ಹೋಗುತ್ತೇವೆ ಎಂದರೆ ಅಲ್ಲಿನ ಜಿಲ್ಲಾಧಿಕಾರಿಗಳು ಮತ್ತು ಪೋಲೀಸರು ತಡೆಹಾಕಿದ್ದಾರೆ. ಇದು ನಮ್ಮ ಗಮನಕ್ಕೆ ಬಂದಿದೆ. ಸರ್ಕಾರದ ಗಮನಕ್ಕೂ ಬಂದಿದೆ. ಇವತ್ತೇನು ಹೊಸದಾಗಿ ಈ ರೀತಿ ಆಗುತ್ತಿಲ್ಲ. ಹೋದ ಸಾರಿ ಸಹ ಇದೇ ರೀತಿ ಆಗಿದ್ದರಿಂದ ಅನೇಕ ರೈತರು ತಮ್ಮ ಕಬ್ಬಿನ ಬೆಳೆಯನ್ನು ಸುಟ್ಟಿದ್ದಾರೆ. ಆದ್ದರಿಂದ ಸರ್ಕಾರದ ಪರವಾಗಿ ಸಕ್ಕರೆ ಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ. ಇದರ ಬಗ್ಗೆ ಸಚಿವರು ಪರಿಶೀಲನೆ ಮಾಡಿ ಅವಶ್ಯಕವಾದ ಒಂದು ಹೇಳಿಕೆಯನ್ನು ನೀಡಬೇಕು. ಅಲ್ಲಿ ನಿಜವಾಗಿ ರೈತರು ಬೆಳೆದ ಬೆಳೆ ಹೆಚ್ಚಾಗಿದೆ. ಸಕ್ಕರೆ ಕಾರ್ಖಾನೆಗೆ ಎಷ್ಟು ಬೇಕೋ ಅದಕ್ಕಿಂತ ಹೆಚ್ಚಾಗಿದ್ದರೆ ಆ ಬೆಳೆಯನ್ನು ಹೊರಗಡೆ ತೆಗೆದುಕೊಂಡು ಹೋಗುವುದಕ್ಕೆ ತಾವು ಪರವಾನಗಿ ಕೊಡಬೇಕು ಹಾಗೂ ಸಂಬಂಧಪಟ್ಟವರಿಗೆ ಸೂಕ್ತ

ನಿರ್ದೇಶನ ಕೊಡಬೇಕು. ಇದರ ಬಗ್ಗೆ ಸರ್ಕಾರ ಏನು ಹೇಳುತ್ತದೆ ಎಂದು ನಾನು ತಿಳಿಯಬಯಸುತ್ತೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಅಧ್ಯಕ್ಷರೇ, ರೈತರು ಬದುಕುತ್ತೇವೆ ಅಂದರೂ ಸರ್ಕಾರದವರು ಬಿಡುವುದಕ್ಕೆ ತಯಾರಿಲ್ಲ. ಬೇಕಾದಷ್ಟು ಸಾಲ ಮಾಡಿ ಖರ್ಚು ಮಾಡಿ ಕಬ್ಬು ಬೆಳೆದ ನಂತರ ಎಲ್ಲಾದರೂ ಹೋಗಿ ಮಾರಿಕೊಂಡು ಬರುತ್ತೇವೆ ಎಂದರೆ ಬಿಡೋಕೆ ತಯಾರಿಲ್ಲ. ತಾವಾದರೂ ಒಂದು ಬಾಂಡ್ ಬರೆದುಕೊಟ್ಟು ಇಷ್ಟು ಅವಧಿಯೊಳಗೆ ಆ ಕಬ್ಬನ್ನು ನುರಿಸುತ್ತೇವೆ ಎನ್ನುವುದಕ್ಕೂ ತಯಾರಿಲ್ಲ. ಹೀಗಾದರೆ ನಾವು ಏನು ಮಾಡಬೇಕು ಹೇಳಿ. ನಮ್ಮ ರಕ್ಷಣೆಗೆ ಯಾರು ಬರಬೇಕು ಹೇಳಿ? ನಾವು ಮಹಾರಾಷ್ಟ್ರಕ್ಕೆ ಒಯ್ಯಬೇಕು ಎಂದು ಇಚ್ಛಿಪಟ್ಟವರಲ್ಲ. ಏಕೆಂದರೆ ಕರ್ನಾಟಕದ ಯಾವುದಾದರೂ ಸಕ್ಕರೆ ಕಾರ್ಖಾನೆ ಇದ್ದರೆ ಅದಕ್ಕೇ ನಾವು ಕೊಟ್ಟುಬಿಡುತ್ತೇವೆ. ಅವರು ಬಾಂಡ್ ಬರೆದುಕೊಡಲಿ. ಮಹಾರಾಷ್ಟ್ರಕ್ಕೆ ಒಯ್ದರೆ ಒಂದು ನೂರು ರೂಪಾಯಿ ಒಂದು ಟನ್‌ಗೆ ಹೆಚ್ಚಿನ ಖರ್ಚು ನಮಗೆ ಬರುತ್ತದೆ.

ಅಷ್ಟು ಹೆಚ್ಚು ಖರ್ಚುಮಾಡಿ ಹಾಳಾಗಬೇಕು ಎನ್ನುವ ಇಚ್ಛೆ ನಮಗೆ ಇಲ್ಲ. ಹೋದ ವರ್ಷ ರೈತರು ಕಬ್ಬಿನ ತೋಟಕ್ಕೆ ಬೆಂಕಿ ಹಚ್ಚಿದರು. ಅಂದರೆ ಈ ಪರಿಸ್ಥಿತಿಯನ್ನು ತಾವು ಅರ್ಥ ಮಾಡಿಕೊಂಡು ಏನಾದರೂ ಅದಕ್ಕೆ ಸೂತ್ರ ತೆಗೆಯಿರಿ. ಹೋದ ವರ್ಷ ಒಂದು ಟನ್‌ಗೆ 18 ರೂಪಾಯಿ ರೋಡ್ಟ್ಯಾಕ್ಸ್ ಮುರಿದುಕೊಂಡು ಕಳಿಸೋಕೆ ಅಡ್ಡಿ ಇಲ್ಲಾಂತ ಬೆಳಗಾಂ ಜಿಲ್ಲಾಧಿಕಾರಿ ಪ್ರಯತ್ನ ಮಾಡಿದರು. ಅಲ್ಲಿ ಹಲಕರಣಿ ಕಾರ್ಖಾನೆಯಲ್ಲಿ 4 ಕೋಟಿ ರೂಪಾಯಿ ಈ ಪರ್ಚೇಸ್ ಟ್ಯಾಕ್ಸ್ ಸಂಗ್ರಹಣೆ ಆಗಿದೆ. ಮಾನ್ಯ ಮಂತ್ರಿಗಳ ಗಮನಕ್ಕೆ ನಾನು ತಂದಿದ್ದೆ. ಆ ದುಡ್ಡು ವಸೂಲು ಮಾಡೋಕೆ ತಯಾರಿಲ್ಲ. ರೈತರಿಗೂ ಸಿಗಲಿಲ್ಲ, ಸರ್ಕಾರಕ್ಕೂ ಬರಲಿಲ್ಲ. ಮಹಾರಾಷ್ಟ್ರದ ಸಹಕಾರಿ ಸಕ್ಕರೆ ಕಾರ್ಖಾನೆಗೆ ಅದು ಜಮಾ ಆಯಿತು. ಅಲ್ಲಿ ಆಡಿಟ್ ಅಬ್ಜೆಕ್ಷನ್ ಆಗಿದೆ. ಇದು ಕರ್ನಾಟಕದ ರೈತರ ದುಡ್ಡು, ಇದನ್ನು ರೈತರಿಗಾದರೂ ವಾಪಸ್ ಕೊಡಿ ಅಥವಾ ಕರ್ನಾಟಕ ಸರ್ಕಾರಕ್ಕಾದರೂ ಜಮಾ ಮಾಡಿರಿ ಅಂತ. ಆದರೆ ನಮ್ಮ ಸರ್ಕಾರಕ್ಕೆ ಮಾತ್ರ ಆ ದುಡ್ಡು ತೆಗೆದುಕೊಳ್ಳುವಂತಹ ಮನಸ್ಸಿಲ್ಲ. ನಮ್ಮ ಸರ್ಕಾರಕ್ಕೆ ಶ್ರೀಮಂತಿಕೆ ಬಂದಿದೆಯೇನೋ ಗೊತ್ತಿಲ್ಲ ಅಂತೂ ರೈತರು ಬಹಳ ಚಿಂತಾಜನಕ ಪರಿಸ್ಥಿತಿಯಲ್ಲಿದ್ದಾರೆ. ನೋಡ್ರಿ, ನೀವು ಬಹಳ ಜೋರು ಮಾಡಿ ನಾವು ಕಬ್ಬನ್ನು ಬಿಡೋದಿಲ್ಲ ಅಂದರೆ ಇದರಿಂದ ಬಹಳ ದೊಡ್ಡ ಅನಾಹುತವಾಗುತ್ತದೆ.

ಡಾ। ಹೆಗ್ಗಪ್ಪ ಡಿ ಲಮಾಣಿ (ಸಕ್ಕರೆ ಸಚಿವರು) : ಮಾನ್ಯ ಅಧ್ಯಕ್ಷರೇ, ನಮ್ಮ ಸದಸ್ಯರ ಕಳಕಳಿಯನ್ನು ನಾನೂ ಸಹಿತ ಅರ್ಥಮಾಡಿಕೊಳ್ಳುತ್ತಿದ್ದೇನೆ. ಒಂದು ವೇಳೆ ಆ ಸಕ್ಕರೆ ಕಾರ್ಖಾನೆಗೆ ನುರಿಯುವ ಸಾಮರ್ಥ್ಯಕ್ಕಿಂತ ಹೆಚ್ಚು ಕಬ್ಬು ಅಲ್ಲಿದ್ದರೆ ಆ ಕಬ್ಬನ್ನು ಬಿಡುಗಡೆ ಮಾಡಲಿಕ್ಕೆ ನಾವು ಹಿಂದೆಮುಂದೆ ನೋಡುವುದಿಲ್ಲ.

ಶ್ರೀ ಹೆಚ್. ವಿಶ್ವನಾಥಯ್ಯ : ನೀವು ಬೆಳಗಾಂ ಜಿಲ್ಲಾಧಿಕಾರಿ ಮತ್ತು ಬೆಳಗಾಂ ಪೋಲೀಸ್ ವರಿಷ್ಠ ಅಧಿಕಾರಿಗಳನ್ನು ಸಂಪರ್ಕ ಮಾಡಿ. ಇವತ್ತು ಮುಧೋಳ ಪೋಲೀಸ್ ಸ್ಟೇಷನ್ ಮುಂದೆ ಹತ್ತಾರು ಟ್ರಕ್‌ಗಳನ್ನು ಹಿಡಿದು ನಿಲ್ಲಿಸಿದ್ದಾರೆ. ನೀವು ಪರಿಶೀಲನೆ ಮಾಡಿ ಆಮೇಲೆ ಹೇಳಿಕೆ ಕೊಡಿ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೂ ಈ ಸಮಸ್ಯೆ ಇಷ್ಟೊಂದು ಜಟಿಲ ಆಗುವುದಕ್ಕೆ ಏಕೆ ಬಿಟ್ಟರು? ರೈತರು ಬೆಳೆದದ್ದು ತಪ್ಪೆ ಹೇಳಿ, ನೋಡೋಣ. ರೈತರು ಬದುಕುವುದು ಬೇಡವೇ? ಭೂಮಿ ಮೇಲೆ ಬೇರೆಯವರ ತರಹ ರೈತರೂ ಬದುಕಬೇಕಾಗುತ್ತದೆ. ಅದಕ್ಕೆ ಅವರ ಕಸುಬು ಮಾಡುತ್ತಾರೆ. ಇವರು ರೈತರ ಮೇಲೆ ಎಷ್ಟು ಹೊರೆ ಹೊರೆಸಿದ್ದಾರೆಂದು ನಾನು ಹೇಳೋಕೆ ಹೋಗುವುದಿಲ್ಲ. ಇಷ್ಟೆಲ್ಲ ಹೊರೆ ಇದ್ದರೂ ರೈತರು ಬೆಳೆದಿರುವ ಕಬ್ಬನ್ನು ಇವರಾದರೂ ತೆಗೆದುಕೊಳ್ಳಲಿ, ಬೇರೆಯವರಿಗಾದರೂ ಮಾರಿಸಿಕೊಡಲಿ. ಸರ್ಕಾರದವರು ಏನು ಮಾಡುತ್ತಿದ್ದಾರೆ?

ಡಾ॥ಹೆಗ್ಗಪ್ಪ ಡಿ ಲಮಾಣಿ : ರೈತರಿಗೆ ಹಾನಿ ಆಗೋದಿಕ್ಕೆ ನಾವು ಬಿಡೋದಿಲ್ಲ. ಈಗ ತಾನೇ ನನ್ನ ಗಮನ ಸೆಳೆದಿದ್ದೀರಿ. ನಾನು ಇವತ್ತೇ ಅಲ್ಲಿನ ಜಿಲ್ಲಾಧಿಕಾರಿಗಳಿಂದ ಕೃಷಿ ಕಚೇರಿಯಿಂದ ಮತ್ತು ಕಾರ್ಖಾನೆಯವರಿಂದಲೂ ರಿಪೋರ್ಟ್ ತರಿಸುತ್ತೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಏಕೆಂದರೆ, ಪೋಲೀಸ್ ಸ್ಟೇಷನ್ ಮುಂದೆ ಟ್ರಕ್ ನಿಂತರೆ ಅದರ ಬಾಡಿಗೆಯನ್ನು ರೈತರಿಂದ ವಸೂಲು ಮಾಡುತ್ತಾರೆ. ದಿವಸಕ್ಕೆ ಸಾವಿರ, ಎರಡು ಸಾವಿರ ರೂಪಾಯಿ ಕೊಡ್ರಿ ಅಂತ.

ಅಧ್ಯಕ್ಷರು : ಅವರು ಹೇಳುವುದನ್ನು ಕೇಳಿಕೊಂಡು ಸದನದಲ್ಲಿ ಒಂದು ಸೂಕ್ತವಾದ ಹೇಳಿಕೆ ಕೊಡಿ.

ಡಾ॥ಹೆಗ್ಗಪ್ಪ ಡಿ ಲಮಾಣಿ : ನಾನು ಎಲ್ಲ ರಿಪೋರ್ಟನ್ನು ಒಳಗೊಂಡಂತಹ ಒಂದು ರಿಪೋರ್ಟ್‌ನ್ ಸೋಮವಾರದ ದಿವಸ ಈ ಸದನಕ್ಕೆ ಒಪ್ಪಿಸುತ್ತೇನೆ.

(ಆ) ಏಪ್ರಿಲ್ ಒಂದನೇ ತಾರೀಖಿನಿಂದ ಆಡಳಿತ ಭಾಷೆ ಕನ್ನಡ ಎಂದು ಘೋಷಣೆಯಾಗಿದ್ದರೂ ಸಹ ಸರ್ಕಾರಿ ಆದೇಶಗಳು ಮತ್ತು ವರದಿಗಳೆಲ್ಲಾ ಇಂಗ್ಲೀಷ್ನಲ್ಲಿರುವುದರ ಬಗ್ಗೆ

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಇವತ್ತು ಮಂಡ್ಯ ಜಿಲ್ಲೆ ಸಕ್ಕರೆ ನಗರದಲ್ಲಿ ಈಗ ತಾನೇ ಮಾನ್ಯ ಮುಖ್ಯಮಂತ್ರಿಗಳು 11 ಗಂಟೆಗೆ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟನೆ ಮಾಡುತ್ತಿದ್ದಾರೆ ಎಂದು ಆಹ್ವಾನ ಪತ್ರಿಕೆಯಲ್ಲಿದೆ. ರಾಜ್ಯದಲ್ಲಿ ಆಡಳಿತ ಭಾಷೆ ಬಗ್ಗೆ ನಾವು ನಿರಂತರವಾಗಿ ಸರ್ಕಾರಕ್ಕೆ ಒಂದಲ್ಲ ಸಾವಿರ ಬಾರಿ ಹೇಳಿದ್ದೇವೆ. ಅನೇಕ ಬಾರಿ ಒತ್ತಡವನ್ನು ತಂದಿದ್ದೀವೆ ಆದರೂ ಸರ್ಕಾರ ತಹಲ್ವರೆಗೂ ಏಪ್ರಿಲ್ 1ನೇ ತಾರೀಖಿನಿಂದ - ನಾವು ಆಡಳಿತ ಭಾಷೆ ಎಂದು ಘೋಷಣೆ ಮಾಡಿದ್ದೇವೆ ಎಂದು ವಿಧಾನಸೌಧದ ನಾಲ್ಕು ಮೂಲೆಗಳಲ್ಲೂ ಅವರ ಭಾವಚಿತ್ರಗಳನ್ನು ಹಾಕಿ ಒಂದು ಕಡೆ ಕನ್ನಡವೇ ಸತ್ಯ ಎಂದು ಮತ್ತೊಂದು ಕಡೆ ಕನ್ನಡವೇ ನಿತ್ಯ ಎಂದು ಮುಖ್ಯಮಂತ್ರಿಗಳ ಮತ್ತು ಕನ್ನಡ ಸಂಸ್ಕೃತಿ ಸಚಿವರಾದ ವಿಶ್ವನಾಥ್ರವರ ಫೋಟೋಗಳ ಕೆಳಗಡೆ ಬರೆದಿದ್ದಾರೆ. ಮುಂದಿನ ಏಪ್ರಿಲ್ ಬರುವ ಹೊತ್ತಿಗೆ ಅಂದರೆ ಇನ್ನು ಎರಡು ತಿಂಗಳಲ್ಲಿ ಬರುತ್ತದೆ. ಈ ತಹಲ್ವರೆಗೂ ಆಡಳಿತಭಾಷೆಯಲ್ಲಿ ಆಡಳಿತ ಯಾವ ಮಟ್ಟದಲ್ಲೂ ನಡೆದಿಲ್ಲ. ಸ್ಪಷ್ಟವಾಗಿ ನಾನು ತಮಗೆ ಹೇಳುತ್ತಿದ್ದೇನೆ. ಇದು ಬರೀ ಘೋಷಣೆಯಾಗಿದೆ. ಸತ್ಯಕ್ಕೆ ದೂರವಾದ ಭರವಸೆಗಳನ್ನು ರಾಜ್ಯದ ಜನತೆಯ ಮುಂದೆ ಮಂಡಿಸುತ್ತಿದ್ದಾರೆಯೇ ಹೊರತು ಇವತ್ತಿನವರೆಗೂ ಜಾರಿ ಆಗಿಲ್ಲ. ಸರ್ವೋಚ್ಚ ನ್ಯಾಯಾಲಯ ಕೂಡ ನಮ್ಮ ಸರ್ಕಾರದ ತೀರ್ಮಾನಕ್ಕೆ ಒತ್ತನ್ನು ಕೊಟ್ಟು ಆಡಳಿತ ಭಾಷೆ ಜೊತೆಗೆ ಕನ್ನಡ ಮಾಧ್ಯಮದ ಬಗ್ಗೆ ಸರ್ಕಾರದ ನಿರ್ಧಾರವನ್ನು ಬೆಂಬಲಿಸಿ ತೀರ್ಪನ್ನು ಕೊಟ್ಟಿದ್ದರೂ ಸಹ ಆ ತೀರ್ಪು ಕೂಡ ಮೂಲೆಗುಂಪಾಗಿ ಉಳಿದಿದೆ. ಇವತ್ತಿಗೂ ಸರ್ಕಾರ ಯಾವುದೇ ಪರಿಣಾಮಕಾರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಪ್ರತಿ ಕನ್ನಡ ಸಾಹಿತ್ಯ ಸಮ್ಮೇಳನದಲ್ಲೂ ಉದ್ದುದ್ದವಾದ ಘೋಷಣೆಗಳನ್ನು ಮಾಡಿ ಭರವಸೆಗಳನ್ನು ನೀಡಿ, ಕನ್ನಡ ನಾಡಿನ ಜನರನ್ನು ಮೂರ್ಖರನ್ನಾಗಿ ಮಾಡುತ್ತಿದ್ದಾರೆ.

ಆ ಉದ್ದೇಶವೇ ಏಪ್ರಿಲ್ 1ನೇ ತಾರೀಖು ಆಡಳಿತ ಭಾಷೆ ಕನ್ನಡ ಮಾಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದಾಗ ನಾನು ಎದ್ದು ಹೇಳಿದೆ, ಏಪ್ರಿಲ್ 1ನೇ ತಾರೀಖು ಮೂರ್ಖರ ದಿನವನ್ನಾಗಿ ಮಾಡುತ್ತಿದ್ದೀರಿ, ಖಂಡಿತ ಮಾಡಕೂಡದು ಎಂದು ಸ್ಪಷ್ಟವಾಗಿ ಹೇಳಿದೆ. ಇವತ್ತೇನಾಗಿದೆ ಎಂದರೆ, ತಮ್ಮ ಶಾಸಕಾಂಗದಲ್ಲೂ ಸ್ವಲ್ಪ ಹೆಚ್ಚು ಕಡಿಮೆ ಕನ್ನಡದ ಬೆಳವಣಿಗೆ ಆಗುತ್ತಿದೆ. ಆದರೂ ಅಲ್ಲಿ ಇಲ್ಲಿ ಇಂಗ್ಲೀಷಿದೆ. ವಿಧಾನಪರಿಷತ್ತಿನಲ್ಲಂತೂ ಕನ್ನಡ ಇಲ್ಲವೇ ಇಲ್ಲ ಬಿಡಿ. ಪಾಪ, ನಾನು ಯಾರ